ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಸಹಯೋಗ
ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು

# ವಿಚಾರ ಸಂಕಿರಣ


















ಹುಣಸೂರಿನಲ್ಲಿರುವ ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ: 16/10/2017 ರಂದು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು, ಅದರಲ್ಲಿ 'ಅಕ್ಕಮಹಾದೇವಿ ಮತ್ತು ಅಲ್ಲಮರ ಸಂವಾದ' ಎಂಬ ವಿಷಯದ ಮೇಲೆ ಉಪನ್ಯಾಸ ಮತ್ತು ಗೋಷ್ಠಿ ಏರ್ಪಾಡಾಗಿತ್ತು. ಇದರ ಜೊತೆಗೆ ಶ್ರೀಮತಿ ವಿ. ಮಾಲಿನಿ ಮತ್ತು ಸಂಗಡಿಗರು ಒಂದು ಗಂಟೆ ಅವಧಿಯವರೆಗೆ ವಿಷಯವನ್ನು ಕುರಿತು ಒಂದು ಸಂಗೀತ ರೂಪಕವನ್ನು ನಡೆಸಿಕೊಟ್ಟರು. 'ಶೂನ್ಯ ಸಂಪಾದನೆ' ಕೃತಿಯಲ್ಲಿ ಬರುವ ಅಲ್ಲಮ ಮತ್ತು ಅಕ್ಕಮಹಾದೇವಿಯವರ ಮುಖಾಮುಖಿ ಮತ್ತು ಅವರ ನಡುವಿನ ಸೈದ್ಧಾಂತಿಕ ಚರ್ಚೆಯನ್ನು ಕುರಿತು ಡಾ. ಚಂದ್ರಶೇಖರಯ್ಯನವರು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ವೆಂಕಟೇಶಯ್ಯನವರು ವಹಿಸಿ ಕಾರ್ಯಕ್ರಮವನ್ನು ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು. ಈ ಸಮಾರಂಭಕ್ಕೆ ಪ್ರೊ. ಆರ್. ಗುರುಸ್ವಾಮಿಯವರು ಸ್ವಾಗತ ಕೋರಿದರು. ಹಾಗೆಯೇ ಡಾ. ಚಂದ್ರಕಾಂತ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ವಿಶೇಷ ಉಪನ್ಯಾಸ, ಗೋಷ್ಠಿ ಮತ್ತು ಸಂಗೀತ ರೂಪಕ ಪದವಿ ತರಗತಿಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಬಹುವಾಗಿ ಹಿಡಿಸಿತು. ಈ ಕಾರ್ಯಕ್ರಮಕ್ಕೆ ಸಭಾಂಗಣ ತುಂಬಿ ತುಳುಕುವಂತೆ ವಿದ್ಯಾರ್ಥಿಗಳು, ನಗರದ ಗಣ್ಯರು, ಆಸಕ್ತರು ಮತ್ತು ಇನ್ನಿತರ ಶಾಲಾ ಕಾಲೇಜುಗಳಿಂದ ಅಧ್ಯಾಪಕರುಗಳು ಆಗಮಿಸಿದ್ದರು. ಅರ್ಧ ದಿನ ನಡೆದ ಈ ಕಾರ್ಯಕ್ರಮ ವಿಶೇಷವಾಗಿತ್ತೆಂದು ಭಾಗವಹಿಸಿದ್ದ ಅನೇಕರು ಅಭಿಪ್ರಾಯಪಟ್ಟರು.

The Symposium and also a Musical Presentation of the topic, 'Akka Mahadevi Mathu Allamara Samvada' was organiced at Sri D. Devararaj Ursu First Grade College, Hunsur, was indeed a grand success. The function was held on 16/10/2017 at the College Auditorium which was fully occupied by students, invitees, officials, faculty of College and many from the town.

Dr. Chandrasekharaiah spoke on the topic elucidating the salient features of the dialogue that took place between Akka Mahadevi and Allama at the Anubhava Mantap at Kalyan of the $12^{th}$ century. The function was presided by Dr. Venkateshaiah, Prinicipal of College. Prof. R. Guruswamy welcomed the gathering. Dr. K. Chandrakanth, Head of the Detpartment of Kannada, introduced the topic. After the main speech Smt. V. Malini and her troupe presented their Musical Presentation.